ಕರ್ನಾಟಕ ಸರ್ಕಾರ

# ಉಪನಿರ್ದೇಶಕರು (ಅಭಿವೃದ್ಧಿ) ಹಾಗು ಪ್ರಾಂಶುಪಾಲರು ಡಯಟ್ ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಕಾರ್ಯಾಲಯ, 2ನೇಬ್ಲಾಕ್ ರಾಜಾಜಿನಗರ ಬೆಂಗಳೂರು-03

ಇ-ಮೇಲ್ ವಿಳಾಸ: diet.bangalore.r@gmail.com dietetsec2020@gmail.com

ಸಂಖ್ಯೆ: ಜಿಶಿತ/ಶಿ.ಲೋ.ಪ್ರೈ.ಮಾ/01/2020-21 ದಿನಾಂಕ: 28-08-2020

## ಜ್ಞಾಪನ

ವಿಷಯ: ಶಿಕ್ಷಾ ಲೋಕಂ ಮೂಲಕ ಸಿಆರ್‌ಪಿಗಳ ಸಾಮರ್ಥ್ಯಅಭಿವೃದ್ಧಿಪಡಿಸುವಕುರಿತು.

ಉಲ್ಲೇಖ: 1. ನಿರ್ದೇಶಕರು, ಡಿಎಸ್‌ಇಆರ್‌ಟಿ, ಬೆಂಗಳೂರು ರವರ ಪತ್ರ ಸಂಖ್ಯೆ:ಡಿಪಿಐ/ ಡಿಎಸ್‌ಇಆರ್‌ಟಿ/ಪಿಎಂಯು-1/ಐಟಿ@ಸ್ಕೂಲ್ಸ್-03/2020-21 ದಿನಾಂಕ 26-06-2020.

********

ಶೈಕ್ಷಣಿಕ ಕ್ಷೇತ್ರ ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಅಳವಡಿಸಿಕೊಳ್ಳುವ ಮೂಲಕ ಸೃಜನಾತ್ಮಕ ಮತ್ತು ಆಸಕ್ತಿಕರ ಕ್ಷೇತ್ರವಾಗಿ ಬದಲಾಗುತ್ತಿದೆ. ತಂತ್ರಜ್ಞಾನವನ್ನು ಆಡಳಿತ, ಬೋಧನೆ, ಮಾಲ್ಯಮಾಪನ, ಮೇಲ್ವಿಚಾರಣೆ ನಡೆಸಲು ಬಳಸಿಕೊಳ್ಳಲಾಗುತ್ತಿದೆ. ತಂತ್ರಜ್ಞಾನವು ಕಾರ್ಯವನ್ನು ನಿರ್ವಹಿಸುವಲ್ಲಿ ದಕ್ಷತೆಯೊಂದಿಗೆ ಸಮಯ ಹಾಗೂ ಆರ್ಥಿಕ ಮಿತವ್ಯಯವನ್ನು ಸಹ ಉಂಟುಮಾಡಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಭೋಧನಾಕ್ರಮ ಬದಲಾವಣೆಗಾಗಿ ಈಗಾಗಲೇ ಟ್ಯಾಲ್ಪ್‌ಕಾರ್ಯಕ್ರಮ ಅನುಷ್ಠಾನಗೊಳಿಸುವ ಮೂಲಕ 63 ಸರ್ಕಾರಿ ಪ್ರೌಢಶಾಲೆಗಳಲ್ಲಿ ತಂತ್ರಜ್ಞಾನ ಆಧರಿತ ಬೋಧನೆಯನ್ನು ಸಹ ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸಹ ತಂತ್ರಜ್ಞಾನ ಆಧರಿಸಿ ಬೋಧಿಸುವ ದಿನಗಳು ದೂರವಿಲ್ಲ. ಶಾಲಾ ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನ, ಮೌಲ್ಯಮಾಪನ ಮತ್ತು ಅನುಪಾಲನೆ ಮಾಡುವ, ಮಾಹಿತಿಗಳನ್ನು ಸಂಗ್ರಹಿಸುವ ಕಾರ್ಯವನ್ನು ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳು ಪ್ರತಿ ನಿತ್ಯ ಮಾಡುತ್ತಿರುತ್ತಾರೆ. ತಂತ್ರಜ್ಞಾನ ಬಳಸಿಕೊಂಡು ಮಾಹಿತಿ ಸಂಗ್ರಹಿಸುವ, ಶಾಲೆಗಳ ಮೇಲ್ವಿಚಾರಣೆ ನಡೆಸುವ, ಶಿಕ್ಷಕರಿಗೆ ತರಬೇತಿ ನೀಡುವ ಮತ್ತು ಇಲಾಖೆಯು ಕೋರುವ ನಿಗದಿತ ಮಾಹಿತಿಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸುವ ಗುರುತರ ಜವಾಬ್ದಾರಿ ಎಲ್ಲಾ ಅಧಿಕಾರಿಗಳದ್ದಾಗಿದೆ.

ಈ ಹಿನ್ನಲೆಯಲ್ಲಿ ಶಿಕ್ಷಾ ಲೋಕಂ ಎಂಬ ಸಂಸ್ಥೆಯು ಮುಕ್ತ ತಂತ್ರಜ್ಞಾನ ವೇದಿಕೆಯನ್ನು ಸೃಜಿಸಿದ್ದು ಅದರ ವಿವಿಧ ಸಾಮರ್ಥ್ಯಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡಯಟ್ ನೇತೃತ್ವದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಮತ್ತು ವಸ್ತುನಿಷ್ಠ ವರದಿಯನ್ನು ಅಪೇಕ್ಷಿಸಿರುತ್ತಾರೆ. ಈ ಸಂಬಂಧ ಗ್ರಾಮಾಂತರ ಜಿಲ್ಲೆಯ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿಆರ್‌ಸಿ/ಸಿಆರ್‌ಪಿ/ಬಿಆರ್‌ಪಿ ಹಾಗೂ ಡಯಟ್‌ನ ಹೋಬಳಿ ಮಟ್ಟದ ನೋಡಲ್ ಅಧಿಕಾರಿಗಳಿಗೆ 3 ವಿಭಿನ್ನವಾದ ನೂತನ ತಂತ್ರಜ್ಞಾನ ಆಧರಿತ ಆ್ಯಪ್‌ಗಳನ್ನು (ಉನ್ನತಿ,ಬೋಧ್ ಮತ್ತು ಸಮೀಕ್ಷಾ) ಅಳವಡಿಸುವ ಸಂಬಂಧ ತರಬೇತಿಯನ್ನು ಹಾಗೂ ಸಿ.ಆರ್.ಪಿ ಗಳಿಗೆ ಅವರ ಕರ್ತವ್ಯ, ಜವಾಬ್ದಾರಿ, ಶಾಲಾ ಮೇಲ್ವಿಚಾರಣೆ, ಸಿ.ಆರ್.ಸಿ. ಅಭಿವೃದ್ಧಿ, ಹಾಗೂ ಪ್ರಾಯೋಗಿಕ ಕಲಿಕೆಯ ವಿವಿಧ ಅಂಶಗಳ ಕುರಿತು ಆನ್‌ಲೈನ್ ತರಬೇತಿ ನೀಡಲಾಗುತ್ತದೆ. ಪ್ರಾಯೋಗಿಕ ಕಲಿಕೆಗಾಗಿ ಪ್ರಸಕ್ತ ಚಾಲ್ತಿಯಲ್ಲಿರುವ ವಿದ್ಯಾಗಮ ಕಾರ್ಯಕ್ರಮದ ಅನುಷ್ಠಾನದ ಪ್ರಕ್ರಿಯೆ, ಸವಾಲುಗಳು, ಹೊಳಹುಗಳು, ಸಹಯೋಗ ಪ್ರಯತ್ನಗಳು ಕುರಿತ ಯೋಜನೆಯನ್ನು ರೂಪಿಸಲು ತೀರ್ಮಾನಿಸಲಾಗಿದೆ. ಒಂದು ತಿಂಗಳಲ್ಲಿ ಈ ಪ್ರಾಯೋಗಿಕ ತರಬೇತಿಯನ್ನು ನಡೆಸುವ

Scanned with CamScanner

ಮೂಲಕ ಶಿಕ್ಷಾಲೋಕಂನ ತಂತ್ರಜ್ಞಾನ ವೇದಿಕೆಯ ಸಾಮರ್ಥ್ಯದ ಮಾಲ್ಯಮಾಪನ ನಡೆಸಿ ಮಾನ್ಯ ಅಯುಕ್ತರು ಸೂಚನೆಯಂತೆ ವರದಿಯನ್ನು ನೀಡಲು ಯೋಜಿಸಲಾಗಿದೆ.

ಈ ಸಂಬಂಧ ಬೆಂಗಳೂರು ಗ್ರಾಮಾಂತರ ಡಯಟ್‌ನ ನೇತೃತ್ವದಲ್ಲಿ ಈ ಕಾರ್ಯಕ್ರಮವನ್ನು ಸೆಪ್ಟಂಬರ್ ಮಾಹೆಯಲ್ಲಿ ನಡೆಸಲು ತೀರ್ಮಾನಿಸಿದೆ. ಮಂತ್ರಾ ಫಾರ್‌ಚೇಂಜ್ ಸಂಸ್ಥೆಯವರು ಶಿಕ್ಷಾಲೋಕಂನ ತಂತ್ರಜ್ಞಾನ ವೇದಿಕೆಯನ್ನು ಬಳಸಿಕೊಂಡು ಈ ತರಬೇತಿಯನ್ನು ಡಯಟ್ ಸಹಯೋಗ ಮತ್ತು ಮಾರ್ಗದರ್ಶನದಲ್ಲಿ ನಿರ್ವಹಿಸುತ್ತಾರೆ. ಪ್ರಾಯೋಗಿಕ ಕಾರ್ಯಕ್ರಮದ ಅನುಷ್ಠಾನದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಎಲ್ಲಾ ಕ್ಲಸ್ಟರ್ ಬಿಆರ್‌ಸಿ/ಸಿಆರ್‌ಪಿಗಳು/ಬಿಆರ್‌ಪಿಗಳು ಮತ್ತು ಡಯಟ್‌ನ ಹೋಬಳಿ ಮಟ್ಟದ ನೋಡಲ್ ಅಧಿಕಾರಿಗಳು ಒಳಗೊಂಡಿರುತ್ತಾರೆ. ಎರಡು ತಾಲ್ಲೂಕಿನ ಎಲ್ಲಾ ಅಧಿಕಾರಿ ವರ್ಗದವರ ಮೊಬೈಲ್ ಸಂಖ್ಯೆ, ಕ್ಲಸ್ಟರ್ ವಿಳಾಸ, ಇ-ಮೇಲ್ ವಿಳಾಸವನ್ನು ಈಗಾಗಲೇ ಶಿಕ್ಷಾ ಲೋಕಂ ಮತ್ತು ಮಂತ್ರಾ ಫಾರ್ ಚೇಂಜ್ ಸಂಸ್ಥೆಯವರಿಗೆ ನೀಡಲಾಗಿದೆ. ಸದರಿ ಸಂಸ್ಥೆಯವರು ಪ್ರತಿ ಅಧಿಕಾರಿಗಳಿಗೆ ಪ್ರತ್ಯೇಕವಾದ ಯುಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ತರಬೇತಿಯ ಅವಧಿಯಲ್ಲಿ ನೀಡುತ್ತಾರೆ. ತರಬೇತಿಗೆ ಹಾಜರಾಗುವ ಎಲ್ಲಾ ಅಧಿಕಾರಿಗಳು ಸ್ಮಾರ್ಟ್ ಫೋನ್ ಹೊಂದಿರುವುದನ್ನು ಮತ್ತು ತರಬೇತಿಗೆ ತರುವುದನ್ನು ಖಚಿತಪಡಿಸಿಕೊಳ್ಳಲು ಸೂಚಿಸಿದೆ.

ಇದರ ಪ್ರಾಯೋಗಿಕ ಕಾರ್ಯದ ವೇಳಾಪಟ್ಟಿ ಈ ಕೆಳಕಂಡಂತಿದೆ. ಕೆಳಗೆ ನೀಡಲಾಗುವ ದಿನಾಂಕಗಳಂದು ಸಂಬಂಧಿಸಿದ **ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಮನ್ವಯಾಧಿಕಾರಿಗಳು ತರಬೇತಿ ಮತ್ತು ಕಾರ್ಯಾಗಾರಗಳಿಗೆ ಖುದ್ದಾಗಿ ಹಾಜರಿದ್ದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ತಾವು ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿದ ಮಾಹಿತಿಯು ಆ್ಯಪ್ ಮೂಲಕ ಮೇಲಾಧಿಕಾರಿಗಳಿಗೆ ಮಾಹಿತಿ ಸಲ್ಲಿಕೆಯಾಗುವುದರಿಂದ ತಪ್ಪದೇ ಹಾಜರಾಗತಕ್ಕದ್ದು.**

**ತರಬೇತಿಯ ವೇಳಾಪಟ್ಟಿ ಈ ಕೆಳಕಂಡಂತಿದೆ.**

| ಕ್ರ ಸಂ | ದಿನಾಂಕಗಳು | ಚಟುವಟಿಕೆ | ಅವಧಿ | ಸಂಪನ್ಮೂಲ ವ್ಯಕ್ತಿಗಳು | ತರಬೇತಿಯ ಸ್ಥಳ |
|---|---|---|---|---|---|
| 1 | 01-09-2020 | ನೆಲಮಂಗಲ/ದೊಡ್ಡಬಳ್ಳಾಪುರ ಹೋಬಳಿ ಮಟ್ಟದ ಡಯಟ್ ಅಧಿಕಾರಿಗಳಿಗೆ ಆ್ಯಪ್ ಅಳವಡಿಕೆ | ಬೆಳ್ಳಿಗ್ಗೆ 11.00 ರಿಂದ 1.00 | ವೆಂಕಟೇಶ್- ಮಂತ್ರ ಫಾರ್ ಚೇಂಜ್ ಸಂಸ್ಥೆ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, (ಡಯಟ್) ರಾಜಾಜಿನಗರ, ಬೆಂಗಳೂರು-10 |
| 2 | 03-09-2020 | ನೆಲಮಂಗಲ ತಾಲ್ಲೂಕಿನ ಬಿಆರ್‌ಸಿ/ಸಿಆರ್‌ಪಿ/ಬಿಆರ್‌ಪಿ ಗಳಿಗೆ ಬೋಧ್‌ಆ್ಯಪ್ ಅಳವಡಿಸುವುದು | ಬೆಳ್ಳಿಗ್ಗೆ 10.00 ರಿಂದ 12.00 | ವೆಂಕಟೇಶ್- ಮಂತ್ರ ಫಾರ್‌ಚೇಂಜ್ ಸಂಸ್ಥೆ ಡಾ.ಡಿ.ಆರ್ ಪ್ರಸನ್ನಕುಮಾರ್ ಶಿಕ್ಷಾ ಲೋಕಂ ಸಂಸ್ಥೆ | ಬಿ.ಆರ್.ಸಿ ಕೇಂದ್ರ, ನೆಲಮಂಗಲ ತಾಲ್ಲೂಕು ಬೆಂಗಳೂರು ಗ್ರಾ. ಜಿಲ್ಲೆ |
| 3 | 03-09-2020 | ದೊಡ್ಡಬಳ್ಳಾಪುರ ತಾಲ್ಲೂಕಿನ ಬಿಆರ್‌ಸಿ/ಸಿಆರ್‌ಪಿ/ಬಿಆರ್‌ಪಿ ಗಳಿಗೆ ಬೋಧ್‌ಆ್ಯಪ್ ಅಳವಡಿಸುವುದು | ಮಧ್ಯಾಹ್ನ 2.00 ರಿಂದ 4.00 | | ಬಿ.ಆರ್.ಸಿ ಕೇಂದ್ರ, ದೊಡ್ಡಬಳ್ಳಾಪುರ ತಾಲ್ಲೂಕು ಬೆಂಗಳೂರು ಗ್ರಾ. ಜಿಲ್ಲೆ |
| 4 | 07-09-2020 ರಿಂದ 10-09-2020 | ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಬಿಆರ್‌ಸಿ/ಸಿಆರ್‌ಪಿ/ಬಿಆರ್‌ಪಿ ಗಳಿಗೆ ಜೂಮ್/ಬೋಧ್‌ಆ್ಯಪ್ | 4 ದಿನಗಳು (ಬೆಳ್ಳಿಗ್ಗೆ 10.00 ರಿಂದ ಸಂಜೆ 4.00 ಗಂಟೆ ವರೆಗೆ) | ವೆಂಕಟೇಶ್- ಮಂತ್ರ ಫಾರ್‌ಚೇಂಜ್ ಸಂಸ್ಥೆ ಡಾ.ಡಿ.ಆರ್ ಪ್ರಸನ್ನಕುಮಾರ್ ಶಿಕ್ಷಾ ಲೋಕಂ ಸಂಸ್ಥೆ | ಬಿ.ಆರ್.ಸಿ ಕೇಂದ್ರ, ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು ಬೆಂಗಳೂರು ಗ್ರಾ. |

Scanned with CamScanner

| | | | | | |
|---|---|---|---|---|---|
| | | ಮೂಲಕ ಅನ್‌ಲೈನ್‌ತರಬೇತಿ, | | | ಜಿಲ್ಲೆ (ಪ್ರೋಜೆಕ್ಟರ್ ಮೂಲಕ ಬಿಆರ್‌ಸಿ ಕೇಂದ್ರಗಳಲ್ಲಿ ಆಯೋಜಿಸುವುದು) |
| 5 | 11-09-2020 | ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಸಿಆರ್‌ಪಿ ಗಳಿಗೆ ಸಮೀಕ್ಷಾ/ ಉನ್ನತಿ ಆ್ಯಪ್‌ಗಳ ಮುಲಕ ಕ್ಷೇತ್ರ ಕಾರ್ಯದ ಯೋಜನಾ ಉಪಕ್ರಮ ಕುರಿತ ತರಬೇತಿ | 1 ದಿನ (ಬೆಳ್ಳಿಗ್ಗೆ 10.00 ರಿಂದ ಸಂಜೆ 4.00 ಗಂಟೆ ವರೆಗೆ) | ವೆಂಕಟೇಶ್- ಮಂತ್ರ ಫಾರ್‌ಚೇಂಜ್ ಸಂಸ್ಥೆ ಡಾ.ಡಿ.ಆರ್ ಪ್ರಸನ್ನಕುಮಾರ್ ಶಿಕ್ಷಾ ಲೋಕಂ ಸಂಸ್ಥೆ | ಬಿ.ಆರ್.ಸಿ ಕೇಂದ್ರ, ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು |
| 6 | 14-09-2020 ರಿಂದ 26-09-2020 | ತರಬೇತಿ ಪಡೆದ ಅಧಿಕಾರಿಗಳು ಕ್ಷೇತ್ರ ಭೇಟಿ ನೀಡಿ ಇಲಾಖೆಯ ಕಾರ್ಯಕ್ರಮದ ಪ್ರಗತಿಯನ್ನು ಆ್ಯಪ್ ಮೂಲಕ ದಾಖಲಿಸುವುದು | 13 ದಿನಗಳು | | ಕ್ಷೇತ್ರ ಭೇಟಿ ನೀಡಿ ಸಿಆರ್‌ಪಿಗಳು ಮಾಹಿತಿಯನ್ನು ಆ್ಯಪ್ ಮೂಲಕ ಭರ್ತಿ ಮಾಡಿ, ವರದಿಯನ್ನು ಪಡೆಯುವುದು |
| 7 | 14-09-2020 ರಿಂದ 26-09-2020 | ಅನುಷ್ಠಾನ ಅವಧಿಯಲ್ಲಿ ಯೋಜನಾ ಅನುಪಾಲನೆ | ಅನುಕೂಲಕರ ದಿನಾಂಕದಂದು | ಡಯಟ್, ಮಂತ್ರ ಫಾರ್‌ಚೇಂಜ್ ಮತ್ತು ಶಿಕ್ಷಾಲೋಕಂನ ಯೋಜನಾಧಿಕಾರಿಗಳು | ಆನ್‌ಲೈನ್ ವೇದಿಕೆಗಳ ಮೂಲಕ |
| 8 | 28-09-2020 | ಆ್ಯಪ್ ಮೂಲಕ ಅನುಷ್ಠಾನಗೊಂಡ ಕಾರ್ಯಕ್ರಮದ ಬಗ್ಗೆ ಉಪನಿರ್ದೇಶಕರು (ಅ) ರವರಿಂದ ಆನ್‌ಲೈನ್ ಮೂಲಕ ಅನುಪಾಲನೆ | ಬೆಳ್ಳಿಗ್ಗೆ 11.00 ರಿಂದ 1.00 | ಉಪನಿರ್ದೇಶಕರು (ಅಭಿವೃದ್ಧಿ) ಡಯಟ್, ಬೆಂಗಳೂರು ಗ್ರಾ.ಜಿಲ್ಲೆ | ಡಯಟ್, ಬೆಂಗಳೂರು ಗ್ರಾ.ಜಿಲ್ಲೆಯಿಂದಆನ್ ಲೈನ್ ವೇದಿಕೆಯಲ್ಲಿಚರ್ಚೆ |
| 9 | 29-09-2020 | ಆ್ಯಪ್ ಮೂಲಕ ಅನುಷ್ಠಾನಗೊಂಡ ಕಾರ್ಯಕ್ರಮದ ಬಗ್ಗೆ ಸಿಆರ್‌ಪಿ/ಆಧಿಕಾರಿಗಳಿಂದ ಹಿಮ್ಮಾಹಿತಿ ಪಡೆಯುವ ಸಭೆ ಡಯಟ್‌ನ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ | ಬೆಳ್ಳಿಗ್ಗೆ 10.30 ರಿಂದ 1.30 | 2 ತಾಲ್ಲೂಕಿನಿಂದ ಬಿಆರ್‌ಸಿ/ಒಬ್ಬ ಬಿಆರ್‌ಪಿ ಮತ್ತು 5 ಜನ ಸಿಆರ್‌ಪಿ ಗಳು ಕಡ್ಡಾಯವಾಗಿ ಹಾಜರಾಗುವುದು. | ಡಯಟ್, ಬೆಂಗಳೂರು ಗ್ರಾ.ಜಿಲ್ಲೆ ರಾಜಾಜಿನಗರ ಬೆಂಗಳೂರು |
| 10 | 30-09-2020 | ಅನುಷ್ಠಾನಗೊಳಿಸಿದ ಕಾರ್ಯಕ್ರಮದ ಬಗ್ಗೆ ಡಯಟ್ ವತಿಯಿಂದ ವರದಿ ಸಿದ್ದಪಡಿಸುವುದು | 1 ದಿನ | ಹೋಬಳಿ ಮಟ್ಟದ ಡಯಟ್ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿ ವರದಿ ಸಿದ್ದಪಡಿಸುವುದು | |

Scanned with CamScanner

ಮಾನ್ಯ ಆಯುಕ್ತರು ನಿಗಧಿಪಡಿಸಿರುವ ಕಾಲಮಿತಿಯಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈಗಾಗಲೇ ವಿಳಂಬವಾಗಿದ್ದು, ಸೆಪ್ಟಂಬರ್ ಮಾಹೆಯಲ್ಲಿ ಈ ಮೇಲೆ ಸೂಚಿಸಿದ ದಿನಾಂಕಗಳಂದು ಸಂಬಂಧಿಸಿದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಿ ಅನ್‌ಲೈನ್ ಮೂಲಕ ಮಾಹಿತಿ ಸಂಗ್ರಹಿಸುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು. ಯಾವುದೇ ತಾಂತ್ರಿಕ ಸಮಸ್ಯೆಗಳು ಕಂಡು ಬಂದಲ್ಲಿ ಶಿಕ್ಷಾ ಲೋಕಂ ಸಂಸ್ಥೆಯ ನೋಡಲ್ ಅಧಿಕಾರಿಯಾದ ಡಾ. ಡಿ.ಆರ್ ಪ್ರಸನ್ನಕುಮಾರ್ (ಮೊ. ಸಂಖ್ಯೆ: 9880196633) ಅಥವಾ ಮಂತ್ರ ಫಾರ್‌ಚೇಂಜ್ ಸಂಸ್ಥೆಯ ನೋಡಲ್ ಅಧಿಕಾರಿಯಾದ ವೆಂಕಟೇಶ್ (7760715478) ರವರನ್ನು ದೂರವಾಣಿಯ ಮೂಲಕ ಸಂಪರ್ಕಿಸಬಹುದು.

28/8/2020

(ಅನಿತಾ ನಾಜರೆ)
ಉಪನಿರ್ದೇಶಕರು (ಅ) ಹಾಗೂ ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತುತರಬೇತಿ ಸಂಸ್ಥೆ,
ಬೆಂಗಳೂರು ಗ್ರಾಮಾಂತರಜಿಲ್ಲೆ

ಪ್ರತಿಯನ್ನು ಗೌರವ ಪೂರ್ವಕವಾಗಿ:

1. ಮಾನ್ಯ ಅಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01
2. ಮಾನ್ಯ ನಿರ್ದೇಶಕರು, ಡಿಎಸ್‌ಇಆರ್‌ಟಿ, ಬನಶಂಕರಿ 3ನೇ ಹಂತ, ಬೆಂಗಳೂರು.
3. ಮಾನ್ಯ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾ.ಜಿಲ್ಲೆ, ಬೀರಸಂದ್ರ ದೇವನಹಳ್ಳಿ ತಾ.

ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ:

1. ಕ್ಷೇತ್ರ ಶಿಕ್ಷಣಾಧಿಕಾರಿಗಳು/ಕ್ಷೇತ್ರ ಸಮನ್ವಯಾಧಿಕಾರಿಗಳು ನೆಲಮಂಗಲ ಮತ್ತು ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾ. ಜಿಲ್ಲೆ
2. ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಹೋಬಳಿಮಟ್ಟದ ಡಯಟ್ ನೋಡಲ್ ಅಧಿಕಾರಿಗಳು.
3. ಶ್ರೀ ಡಾ. ಡಿ.ಆರ್ ಪ್ರಸನ್ನಕುಮಾರ್, ಶಿಕ್ಷಾ ಲೋಕಂ, ನಂ,733, 17ನೇ ಅಡ್ಡರಸ್ತೆ, 24ನೇ ಮುಖ್ಯರಸ್ತೆ, ಜೆ.ಪಿ ನಗರ 6ನೇ ಹಂತ, ಬೆಂಗಳೂರು-78.
4. ಶ್ರೀ ವೆಂಕಟೇಶ್, ಮಂತ್ರ ಫಾರ್‌ಚೇಂಜ್, ನಂ,733, 17ನೇ ಅಡ್ಡರಸ್ತೆ, 24ನೇ ಮುಖ್ಯರಸ್ತೆ, ಜೆ.ಪಿ ನಗರ 6ನೇ ಹಂತ, ಬೆಂಗಳೂರು-78.
5. ಕಚೇರಿ ಪ್ರತಿ

Scanned with CamScanner